***ಸಮ್ಮೇಳನದ ಸವಿನೋಟ***

*ಮಠಾಧೀಶರಿಗೆ ಭವ್ಯಸ್ವಾಗತ*
ಬೆಂಗಳೂರು : ಬೆಂಗಳೂರಿನ ಪೂರ್ಣಪ್ರಜ್ಞಾ ವಿದ್ಯಾಪೀಠದ ಆವರಣದಲ್ಲಿ ನಡೆಯುತ್ತಿರುವ ಅಖಿಲ ಭಾರತ ಮಾಧ್ವಮಹಾಮಂಡಳದ ೧೬ನೆಯ ಮಧ್ವತತ್ವಜ್ಞಾನ ಸಮ್ಮೇಳನದ ಹಾಗೂ ೫೧ನೆಯ ಮಾಧ್ವರಾದ್ಧಾಂತ ಸಂವರ್ಧಕ ಸಭೆಯ ಅಧಿವೇಶನದ ಉದ್ಘಾಟನೆ ವಿಜ್ರಂಭನೆಯಿಂದ ನಡೆದಿದ್ದು ಇದಕ್ಕಾಗಿ ವಿದ್ಯಾಪೀಠದ ಸುತ್ತಲೂ ತಳಿರು–ತೋರಣಗಳಿಂದ ಅಲಂಕರಿಸಲಾಗಿತ್ತು.

ವಿವಿಧ ಮಾಧ್ವಮಠಗಳ ೧೨ ಮಂದಿ ಮಠಾಧಿಪತಿಗಳು ಪೇಜಾವರ ಮಠದ ಶ್ರೀವಿಶ್ವೇಶತೀರ್ಥ ಶ್ರೀಪಾದರ್ ನೇತೃತ್ವದಲ್ಲಿ ಸಮ್ಮೇಳನದ ಸ್ಥಳಕ್ಕೆ ಆಗಮಿಸಿದಾಗ ಪುಷ್ಪವೃಷ್ಠಿ ಶಂಕ ಜಾಗಟೆಗಳ ನಿನಾದ ಕಿವಿಕಣ್ಣುಗಳಿಗೆ ತಂಪೆರೆಯಿತು.

*ಮಧ್ವನಮನ*
ಭಂಡಾರಕೇರಿ – ಫಲಿಮಾರು ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದರು ಮಧ್ವಾಚಾರ್ಯರ ಚಿತ್ರಪಟಕ್ಕೆ ಆರತಿ ಎತ್ತುವ ಮೂಲಕ ಅನೌಪಚಾರಿಕವಾಗಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ದಾಸಸಾಹಿತ್ಯ ಪಂಡಿತ ಅರಳು ಮಲ್ಲಿಗೆ ಪಾರ್ಥಸಾರಥಿ ಉದ್ಘಾಟನಾ ಕಾರ್ಯಕ್ರಮ ನಿರ್ವಹಿಸಿದ್ದು ಪ್ರಾರಂಭದಲ್ಲಿ ಕರ್ನಾಟಕ ಸಂಗೀತ ವಿದುಷಿ ಶ್ರೀಮತಿ ನಾಗವಲ್ಲೀ ನಾಗರಾಜ್ ಅವರು ಪ್ರಾರ್ಥನೆ ಮಾಡಿದರು.

*ಅನೇಕ ಮಠಾಧೀಶರ ಅಪೂರ್ವ ಸಮ್ಮಿಲನ*
ಮಧ್ವತತ್ವಕ್ಕೆ ಬದ್ಧವಾಗಿರುವ ೨೨ ಮಠಗಳ ಪೈಕಿ ೧೨ ಮಠಾಧೀಶರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ಅಪೂರ್ವವೆಂದು ಪ್ರೊ.ಕೆ.ಟಿ.ಪಾಂಡುರಂಗಿ ಅವರು ಅಭಿಪ್ರಾಯಿಸಿದರು. ಕಣ್ವಮಠದ ಶ್ರೀವಿದ್ಯಾಭಾಸ್ಕರ ತೀರ್ಥರು ಮತ್ತು ಬಾಳುಗಾರು ಮಠದ ಶ್ರೀ ರಘುಭೂಷಣತೀರ್ಥರು ಸಮ್ಮೇಳದಲ್ಲಿ ಭಾಗವಹಿಸಿದ್ದು ದೂರಸರಿದಿದ್ದ ಮಠಾಧೀಶರುಗಳನ್ನು ಒಂದುಗೂಡಿಸಿದಂತಾಗಿತ್ತು.

*ವೆಂಕಟಾಚಲಯ್ಯ – ಇಂಗ್ಲೀಷ್*
ವೃತ್ತಿಯ ಅಭ್ಯಾಸದಿಂದಾಗಿ ಇಂಗ್ಲೀಷನಲ್ಲೇ ಭಾಷಣ ಮಾಡಿದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯನವರು ಉಪನಿಷತ್ತು, ದ್ವೈತಸಿದ್ಧಾಂತ ಶ್ರೇಷ್ಠತೆ ಮತ್ತು ದ್ವಾದಶಸ್ತೋತ್ರಗಳ ಹಿರಿಮೆಯ ಬಗ್ಗೆ ವಿದ್ವತ್ ಪೂರ್ಣ ವಿವರಣೆ ನೀಡಿದರು. ಸನ್ಯಾಸಿಗಳು ಮನಸ್ಸು ಮಾಡಿದರೆ ತಮ್ಮ ತಪ:ಶಕ್ತಿಯಿಂದ ಭಗವಂತ ನಿರ್ಣಯಗಳನ್ನು ಬದಲಾಯಿಸುವ ಶಕ್ತಿ ಹೊಂದಿದ್ದಾರೆ ಎಂದು ಹೇಳಿದ ಅವರು ತನಗೆ ಮಂತ್ರಾಲಯ ಶ್ರೀಗಳೊಂದಿಗೆ ಆದ ಅನುಭವವೊಂದನ್ನು ವಿವರಿಸಿದರು.

*ವಂಕಟರಮಣನ ಕೃಪಾಪ್ರಸಾದರು*
ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ತತ್ವಜ್ಞಾನ ಸಮ್ಮೇಳನದಲ್ಲಿ ಸನ್ಮಾನಿಸಲ್ಪಟ್ಟ ಪ್ರಧಾನಮಂತ್ರಿಯವರ ವಾರ್ತಾ ಸಲಹೆಗಾರ ಪಿ.ವಿ.ಆರ್.ಕೆ.ಪ್ರಸಾದರನ್ನು 'ಪರ್ವತದ ಮೇಲಿನ ವೆಂಕಟರಮಣನ ಕೃಪಾಪ್ರಸಾದರು' ಎಂದು ಪರಿಚಯ ಮಾಡಿಕೊಟ್ಟರು.

*ವಿಷ್ಣು ಲೋಕದ ಸೇವಕರು*

ಆಕಾಶ ಮತ್ತು ಸಮುದ್ರಗಳು ವಿಷ್ಣುವಿನ ಎರಡು ಸ್ಥಾನಗಳು. ಈ ಎರಡೂ ಸ್ಥಾನಗಳಲ್ಲಿ ಕನ್ನಡಿಗರೂ ಮಾಧ್ವತತ್ವಾನುಯಿಗಳೂ ಆದ ಪ್ರೊ.ಯು.ಆರ್.ರಾವ್ ಮತ್ತು ಪ್ರೊ.ಎಸ್.ಆರ್.ರಾವ್ ಅವರು ಕಾರ್ಯನಿರ್ವಹಿಸುತ್ತಿರುವುದು ಕನ್ನಡಿಗರಿಗೇ ಹೆಮ್ಮೆಯ ವಿಷಯ ಎಂದು ಪಾಂಡುರಂಗಿ ಅವರು ವರ್ಣಿಸಿದರು.

*ಭಗವಂತ ವಿದ್ಯುಚ್ಛಕ್ತಿ*

ಭೂಲೋಕ ಒಂದು ಮಹಾಯಂತ್ರವಿದ್ದಂತೆ, ಲೋಕದ ಎಲ್ಲ ಜೀವರೂ ಈ ಯಂತ್ರದ ಭಾಗಗಳು, ಯಂತ್ರದ ಎಲ್ಲ ಭಾಗಗಳಿಗೂ ಒಂದೇ ವಿದ್ಯುತ್ ಹರಿದರೂ ಆ ಭಾಗಗಳು ಬೇರೆ ಬೇರೆ ಕೆಲಸವನ್ನು ಮಾಡುತ್ತವೆ. ಅದೇ ರೀತಿ ಭಗವಂತ ಒಬ್ಬನೇ ಆದರೂ, ಜೀವರು ತಂತಮ್ಮ ಕೈಂಕರ್ಯಗಳಿಗೆ ಭಿನ್ನರಾಗಿದ್ದಾರೆ ಎಂದು ಪೇಜಾವರ ಶ್ರೀ ವಿಶ್ವೇಶತೀರ್ಥ ಶ್ರೀಪಾದರು ವಿವರಣೆ ನೀಡಿದರು. ಭಗವಂತನಿಲ್ಲವೆನ್ನುವ ನಾಸ್ತಿಕವಾದಕ್ಕೂ ಅಸ್ತಿತವಾದ ಅತಿರೇಕಗಳಿಗೂ ಮಧ್ವಾಚಾರ್ಯರು ಏಕಮೇವು ಪರಿಹಾರಸೂತ್ರ ನೀಡಿದ್ದಾರೆ ಎಂದು ಪೇಜಾವರ ಶ್ರೀಗಳು ಹೇಳಿದರು.

*ಸ್ಪಿರಿಚುವೆಲ್ ಪ್ರೋಗ್ರೆಸ್*

ತಿರುಪತಿ : ತಿರುಮಲೆ ದೇವಸ್ಥಾನದ ಮಾಜಿ ನಿರ್ವಹಣಾಧಿಕಾರಿ ಮತ್ತು ಪ್ರಸಕ್ತ ಭಾರತದ ಪ್ರಧಾನಮಂತ್ರಿಯ ವಾರ್ತಾ ಸಲಹೆಗಾರರಾಗಿರುವ ಪಿ.ವಿ.ಆರ್.ಕೆ.ಪ್ರಸಾದರು ದೇವಸ್ಥಾನದ ಸ್ಥಾನ ಬಿಟ್ಟು ಕೇಂದ್ರ ಅಬಕಾರಿ ಸುಂಕ ಆಯುಕ್ತರಾಗಿ ನೇಮಕಗೊಂಡ ಬಗ್ಗೆ ವಿವರಿಸುತ್ತಾ ಇದನ್ನು 'ಸ್ಪಿರಿಚುವೆಲ್ ಪ್ರೋಗ್ರೇಸ್' ಎಂದು ತಿಳಿಸಿದರು. ಇದು ಹೇಗೆಂದರೆ ಧರ್ಮ ಎಂಬ ಸ್ಪಿರಿಟ್ ನಿಂದ ಇನ್ನೊಂದು ಸ್ಪಿರಿಟ್ (ಮದ್ಯ)ನ ನಿರ್ವಹಣೆಗೆ ತಾನು ಇಳಿದದ್ದೂ ಪ್ರಗತಿಯ ಹೆಜ್ಜೆಗಳಲ್ಲೊಂದು ಎಂದರವರು.

*ಧರ್ಮಪೀಠ – ನ್ಯಾಯಪೀಠ*

ಸಮ್ಮೇಳನದಲ್ಲಿ ಧರ್ಮಪೀಠ ಮತ್ತು ನ್ಯಾಯಪೀಠಗಳ ಸಂಗಮವಾಗಿದ್ದ ಅಪೂರ್ವ ದೃಶ್ಯ ಕಂಡುಬಂದಿತ್ತು. ಒಂದೆಡೆ ಪೀಠಾಪತಿಗಳೆಲ್ಲ ಶೋಭಾಯಮಾನರಾಗಿ ಗೋಚರಿಸುತ್ತಿದ್ದರೆ, ಇನ್ನೊಂದೆಡೆ ನ್ಯಾಯಮೂರ್ತಿಗಳಾದ ಜಸ್ಟಿಸ್ ನಿಟ್ಟೂರು ಶ್ರೀನಿವಾಸರಾವ್, ಜಸ್ಟಿಸ್ ನಾವಡಗಿ, ಜಸ್ಟಿಸ್ ರಾಮಾಜೋಯಿಸ್ ಮತ್ತು ಜಸ್ಟಿಸ್ ಎಂ.ಎನ್.ವೆಂಕಟಾಚಲಯ್ಯನವರು ವಿರಾಜಿಸುತ್ತಿದ್ದರು.

*ಯುವಗೋಷ್ಠಿಯಲ್ಲಿ 'ಧರ್ಮ'*

ವಿದ್ಯಾಪೀಠದ ವಿದ್ಯಾರ್ಥಿಗಳಾದ ಎನ್.ವೆಂಕಟೇಶರಾವ್, ಕೆ.ಎನ್.ವೆಂಕಟೇಶ್, ರಂಗನಾಥಕಟ್ಟಿ ಮತ್ತು ರಘುನಂದನ್ ಅವರು 'ಧರ್ಮಾಚರಣೆಯ ಅಗತ್ಯ ಮತ್ತು ಸಾಧ್ಯತೆ' ಎಂಬ ವಿಚಾರದ ಬಗ್ಗೆ ಪರವಾಗಿ ಮತ್ತು ವಿರೋಧವಾಗಿ ಮಾತನಾಡಿದರು.